ಚನ್ನಪಟ್ಟಣಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರು

524 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚನ್ನಪಟ್ಟಣ ಪಟ್ಟಣಕ್ಕೆ ಕಾವೇರಿ ನದಿಯ ಮೂಲದಿಂದ ನೀರು ಸರಬರಾಜು ಮಾಡುವ ಯೋಜನೆ ಸರ್ಕಾರದ ಅನುಮೋದನೆಯಲ್ಲಿರುವುದು ನಿಜವೇ?*

ಆ) *ಹಾಗಿದ್ದರೆ, ಈ ಯೋಜನೆಯು ಯಾವಾಗ ಮಂಜೂರಾತಿ ದೊರಕುತ್ತದೆ.*

ಇ) *ಈ ಯೋಜನೆಯ ಅಂದಾಜು ವೆಚ್ಚವಾದ ಒಂಬತ್ತು ಕೋಟಿ ರೂಪಾಯಿಗಳನ್ನು ಈ ವರ್ಷದ ಆಯವ್ಯಯದಲ್ಲಿ ಸೇರಿಸಲಾಗಿದೆಯೇ*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ನಗರ ಮಾಪನ ವ್ಯವಸ್ಥೆ ಕಛೇರಿ ಕಟ್ಟಡ, ಗುಳೇದಗುಡ್ಡ

356 - ಶ್ರೀ ಹೆಚ್.ವೈ. ಮೇಟಿ. (ಗುಳೇದಗುಡ್ಡ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಳೇದಗುಡ್ಡ ನಗರ ಮಾಪನ ಕಛೇರಿಗೆ ಸೂಕ್ತ ಕಟ್ಟಡ ಇಲ್ಲದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೆ?*

ಆ) *ಹಾಗಿದ್ದಲ್ಲಿ, ಹೊಸ ಕಟ್ಟಡಕ್ಕಾಗಿ ಪ್ಲಾನ್ ಅಂದಾಜು ಪತ್ರಿಕೆ ಮುಂತಾದುವನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗಿದೆಯೆ?*

ಇ) *ಹಾಗಿದ್ದಲ್ಲಿ, ಕಟ್ಟಡದ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಗುವುದು.*

ಈ) *ಸದರಿ ಕಟ್ಟಡ ನಿರ್ಮಾಣಕ್ಕಾಗಿ ಆಗುವ ವೆಚ್ಚ ಎಷ್ಟು?*

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಸಧ್ಯದಲ್ಲಿ ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಲಾಲ್‌ಬಾಗಿನಲ್ಲಿ ಮೈಸೂರಿನ ಬೃಂದಾವನ ಉದ್ಯಾನವದಲ್ಲಿರುವ ಮಾದರಿಯಲ್ಲಿ ಮಧುರ ಸಂಗೀತ ಕಾರಂಜಿಯನ್ನು ಸ್ಥಾಪಿಸುವುದು

346 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲಾಲ್‌ಬಾಗಿನಲ್ಲಿ ಮೈಸೂರಿನ ಬೃಂದಾವನ ಉದ್ಯಾನವನದಲ್ಲಿರುವ ಮಾದರಿಯಲ್ಲಿ ಮಧುರ ಸಂಗೀತ ಕಾರಂಜಿಯನ್ನು ಸ್ಥಾಪಿಸುವ ಉದ್ದೇಶವಿದೆಯೇ?*

ಆ) *ಇಲ್ಲದಿದ್ದಲ್ಲಿ, ಪ್ರವಾಸಿಗರನ್ನು ಆಕರ್ಷಿಸಲು ಲಾಲ್‌ಭಾಗಿನಲ್ಲಿ ಮಧುರ ಸಂಗೀತ ಕಾರಂಜಿಯನ್ನು ಸರ್ಕಾರವು ಸ್ಥಾಪಿಸುವುದೇ?*

ಶ್ರೀ. ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಇಲ್ಲ.

ಆ) ಇಲ್ಲ.